ಮಾಡಲಿಲ್ಲ. ಅದರ ಬಗ್ಗೆ ನಾನು ತಲೆಕೆಡಿಸಿಕೊಂಡಿರಲಿಲ್ಲ, ನಾನು ನನ್ನ ಗಂಡನ ಅಭಿರುಚಿಗೆ ತಕ್ಕ ಹಾಗೆ ಇರಲೇಬೇಕಿತ್ತು. ಯಾಕೆಂದರೆ ನನಗೆ ನನ್ನ ವೈವಾಹಿಕ ಜೀವನವು ಬಹಳ ಮುಖ್ಯವಾಗಿತ್ತು.'

'ಚಿಕ್ಕಪ್ಪನ ಸಾವಿನ ನಂತರ ನನಗೆ ಈ ಇಷ್ಟವಿಲ್ಲದ ಜೀವನಶೈಲಿ ಸಾಕು ಅನ್ನಿಸಿತು. ಯಾರಿಗಾಗಿ ಬದಲಾದೆನೋ ಈಗ ಅವರಿಲ್ಲ. ಹಾಗಾಗಿ ಇನ್ನುಳಿದ ದಿನಗಳನ್ನು ನನಗೆ ಬೇಕಾದ ಹಾಗೆ ಬದುಕೋಣ ಅನ್ನಿಸ್ತು. ಹಾಗಾಗಿ ನಾನು ಈ ಹಳ್ಳಿಗೆ ಬಂದೆ. ಗಿಡ್ಡವಿದ್ದ ನನ್ನ ಕೂದಲು ಉದ್ದವಾಯಿತು. ನನ್ನ ಪ್ರೀತಿಯ ಮಲ್ಲಿಗೆ ಮತ್ತೆ ನನ್ನ ಮುಡಿಗೇರಿತು. ಈಗ ಎಲ್ಲರೂ ನನಗೆ ಹುಚ್ಚು ಹಿಡಿದಿದೆ ಎನ್ನುತ್ತಿದ್ದಾರೆ. ಅಂದು ಯಾವ ಕಾರಣಕ್ಕೆ ನನ್ನ ದೂರ ಇಟ್ಟಿದ್ದರೋ ಈಗ ಮತ್ತೆ ನನ್ನ ಬದಲಾವಣೆಗೆ ಹುಚ್ಚಿ ಪಟ್ಟಕಟ್ಟಿ ನನ್ನ ದೂರ ಇಡುತ್ತಿದ್ದಾರೆ.' ಚಿಕ್ಕಮ್ಮನ ಕಣ್ಣಲ್ಲಿ ತೆಳುವಾಗಿ ನೀರು ಗೋಚರಿಸಿತು.

'ಹಾಗೆಂದು ಚಿಕ್ಕಪ್ಪನ ಮೇಲೆ ಬೇಜಾರಿಲ್ಲ. ನನ್ನನ್ನು ಅವರು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದರು.. ಆದರೆ ಈಗ ನಾನು ನನ್ನ ಇಚ್ಚೆಯ ಪ್ರಕಾರ ಜೀವಿಸುವುದು ತಪ್ಪೇ?. ಏನು ಮಾಡಲಿ ನೀನೇ ಹೇಳು. ನಾನು ಮಾಡಿದ್ದು ತಪ್ಪೇ. ನಿನಗೂ ಕೂಡ ನನಗೆ ಹುಚ್ಚು ಹಿಡಿದಿದೆ ಅನ್ನಿಸುತ್ತಿದೆಯಾ?' ನೋವು ತುಂಬಿದ ಚಿಕ್ಕಮ್ಮನ ಮಾತು ಕೇಳಿ ಹಿತನಿಗೆ ತುಂಬ ಖೇದವೆನಿಸಿತು. ಛೇ ಚಿಕ್ಕಮ್ಮನ ಪರಿಸ್ಥಿತಿಯನ್ನು ಯಾರೂ ಅರಿಯಲಿಲ್ಲ. ಸ್ವಂತ ಅಕ್ಕ ಅಣ್ಣನವರಿಗೇ ತಿಳಿಯಲಿಲ್ಲ ಅಂದ ಮೇಲೆ ಊರಿನವರನ್ನು ಅಂದು ಏನು ಪ್ರಯೋಜನ ಅಂದುಕೊಂಡಳು.

'ಚಿಕ್ಕಮ್ಮ, ನೀವು ಗ್ರೇಟ್. ಗಂಡನಿಗೋಸ್ಕರ ಬದಲಾದಿರಿ, ನಿಮ್ಮ ತರಹ ನಮ್ಮಲ್ಲಿ ಎಷ್ಟೋ ಜನ ಹೆಂಗಸರು ತಮ್ಮದಲ್ಲದ ಜೀವನ ಸ್ವಭಾವನ್ನು ಗಂಡ ಮಕ್ಕಳಿಗೋಸ್ಕರ ಅನುಕರಿಸುತ್ತಾರೆ, ಅದರಿಂದಾಗಿ ಯಶಸ್ವೀ ದಾಂಪತ್ಯ ಜೀವನವನ್ನು ನಡೆಸುತ್ತಾರೆ. ನೀವು ಅದೇ ತರಹ ಮಾಡಿದ್ದೀರಾ. ಆದ್ರೆ ಈಗ ನೀವು ನಿಮ್ಮ ಇಷ್ಟ ಪ್ರಕಾರ ಜೀವಿಸಬೇಕೆಂದಿರುವಿರಿ. ತಪ್ಪೇನು? ನಿಮಗೂ ಕೂಡ ಇರುವುದು ಇದು ಒಂದೇ ಜೀವನ. ನಿಮಗೆ ಬೇಕಾದ ಹಾಗೆ ಜೀವಿಸುವ ಹಕ್ಕು ನಿಮಗಿದೆ. ಇದರಿಂದ ಬೇರೆ ಯಾರಿಗೂ ತೊಂದರೆ ಇಲ್ಲ. ಹಾಗಾಗಿ ನಿಮ್ಮ ಈ ನಿರ್ಧಾರ ಖಂಡಿತವಾಗಿಯೂ ಸರಿಯಾಗಿಯೇ ಇದೆ ಚಿಕ್ಕಮ್ಮ. ನೀವು ನೀವಾಗಿರಿ. ಈ ಸಮಾಜಕ್ಕೆ ಹೆದರಿ ಮತ್ತೆ ನೀವು ಯಾವ ಮುಖವಾಡವನ್ನೂ ಹಾಕಬೇಕಿಲ್ಲ. ಈ ವಿಷಯದಲ್ಲಿ ನಿಮಗೆ ನನ್ನ ಸಂಪೂರ್ಣ ಬೆಂಬಲ ಇದೆ' ಅಂದ ಹಿತಳ ಮಾತಿಗೆ ಚಿಕ್ಕಮ್ಮ ಸಮಧಾನಗೊಂಡಂತೆ ಕಾಣಿಸಿತು. ಹಿತಳನ್ನು ಪ್ರೀತಿಯಿಂದ ತಬ್ಬಿಕೊಂಡು 'ನನಗೆ ಇನ್ನು ಯಾರು ಏನು ಹೇಳಿದರೂ ಪರವಾಗಿಲ್ಲ ಹಿತ. ನೀನು ನನ್ನ ಉದ್ದೇಶ ಅರ್ಥ ಮಾಡಿಕೊಂಡಿದ್ದೀಯಲ್ಲ, ಅಷ್ಟು ಸಾಕು' ಅಂದವರೇ ಒಳಗಡೆ ನಡೆದರು.

'ಚಿಕ್ಕಮ್ಮನಿಗೆ ಹುಚ್ಚು' ಎನ್ನುತ್ತಿರುವ ಈ ಸಮಾಜಕ್ಕೆ ಚಿಕ್ಕಮ್ಮನ ಅಂತರಾಳವನ್ನು ಅರಿಯುವ ಸಾಮರ್ಥ್ಯ ಖಂಡಿತ ಇಲ್ಲ. ಸಮಾಜವನ್ನು ಬದಲಾಯಿಸುವುದು ಅಷ್ಟು ಸುಲಭವಲ್ಲ. ಎಲ್ಲರೂ ಅವರವರ ಮೂಗಿನ ನೇರಕ್ಕೆ ತಕ್ಕಂತೆ ಯೋಚಿಸುತ್ತಾರೆ. ಆದರೆ ಚಿಕ್ಕಮ್ಮನನ್ನು ದೂರ ಮಾಡಿರುವ ತನ್ನ ಅಮ್ಮ ಮತ್ತು ಅವರ ಅಣ್ಣ ಅತ್ತಿಗೆಯರಿಗೆ ವಿಷಯ ಅರ್ಥ ಮಾಡಿಸಿ ಅವರನ್ನು ಒಂದು ಮಾಡಬೇಕೆಂಬ ಸಂಕಲ್ಪವನ್ನು ಮನಸ್ಸಿನಲ್ಲಿ ಮಾಡಿಕೊಂಡವಳೇ ಚಿಕ್ಕಮ್ಮನನ್ನು ಹಿಂಬಾಲಿಸಿ ಮನೆಯ ಒಳಗಡೆ ಹೆಜ್ಜೆ ಹಾಕಿದಳು ಹಿತ.

■

# ಒಂದು ಮುಳ್ಳಿನ ಕಥೆ

■ **ಡಾ. ಅಂಬವ್ವಾ ಚಿಕಾಲಗುಡ್ಡ**

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಮನೆಗಳು ಚಿಕ್ಕದಿದ್ದರೂ, ಮನೆಯ ಮುಂದೆ ಸೊಗಸಾದ ಅಂಗಳ, ಮನೆಯ ಹಿಂದೆ ಹಿತ್ತಲ ಇದ್ದೇ ಇರುತ್ತದೆ. ಹಾಗೆಯೇ ನನ್ನೂರಲ್ಲಿ ನನಗೊಂದು ಮನೆ, ಹಿತ್ತಲು ಸ್ವಲ್ಪ ದೊಡ್ಡದಿತ್ತು. ಹಿತ್ತಲ ಸೀಮೆ ಸುತ್ತಲೂ ಕಲ್ಲಿನಿಂದ ಸಡಿಲಾಗಿ ಕಟ್ಟಿದ ಅವಾರ ಗೋಡೆ ಹಾಕಿಸಿದ್ದೆ. ಹಿತ್ತಲಲ್ಲಿ ತೆಂಗು, ಸೀತಾಫಲ, ಚಿಕ್ಕು, ನೀಲಗಿರಿ ಗಿಡಗಳು, ಮಲ್ಲಿಗೆ, ದಾಸವಾಳ, ಗುಲಾಬಿ ಇತ್ಯಾದಿ ಹೂಗಂಟಿಗಳು ಅವುಗಳ ಮಧ್ಯದಲ್ಲಿ ಆಚೆ ಈಚೆ ಬದನೆ, ಬೆಂಡೆ, ಹಾಗಲಕಾಯಿ, ಕೊತ್ತಂಬರಿ ಮತ್ತು ಕರಿಬೇವು ಇತ್ಯಾದಿ ತರಕಾರಿ ಬೆಳೆಯುವುದು ವಾಡಿಕೆ ಆಗಿತ್ತು. ಅವುಗಳನ್ನು ಮೇಕೆ, ಕುರಿ, ಹಂದಿ ಇತ್ಯಾದಿ ದನಕರುಗಳಿಂದ ಸಂರಕ್ಷಿಸಲು ಅವಾರ ಗೋಡೆಯ ಮೇಲೆ ಮುಳ್ಳಿನ ಕಂಟಿ ಇರಿಸಿದ್ದೆ. ನಾನು ಅನೇಕ ವರ್ಷಕಾಲ ಅಲ್ಲಿಯೇ ಇದ್ದೆ.

ನಂತರ ಬೆಂಗಳೂರಿನಲ್ಲಿ ಎಂಜಿನಿಯರಾಗಿ ಕೆಲಸ ಮಾಡುತ್ತಿದ್ದ ಮಗನ ಹತ್ತಿರ ವಾಸಕ್ಕಾಗಿ ಹೋದೆ. ಆದರೆ ನಮ್ಮೂರಿನಲ್ಲಿರುವ ಅಲ್ಪ ಸ್ವಲ್ಪ ಜಮೀನು ನೋಡಿಕೊಳ್ಳಲು ಆಗಾಗ ನನ್ನ ಊರಾದ ಆನಂದಪುರಕ್ಕೆ ಹೋಗಿ ಬರುತ್ತಿದ್ದೆ. ಹೀಗಿರುವಾಗ ಒಂದು ಸಲ ಊರಲ್ಲಿ ಇದ್ದಾಗ, ಬಟ್ಟೆ ಒಣ ಹಾಕಲು ಹಿತ್ತಲಿಗೆ ಹೋದೆ. ಮುಳ್ಳಿನ ಸಣ್ಣಗೊಂಚಲಿನ ಮೇಲೆ ಕಾಲಿಟ್ಟೆ ಕಾಲಿಗೆ ಮುಳ್ಳೊಂದು ಚುಚ್ಚಿತು; ಅದೂ ಜಾಲಿ ಮುಳ್ಳು. ತಕ್ಷಣ ಒಂದೇ ಕಾಲಿನ ಮೇಲೆ ನಿಂತು ಆ ಮುಳ್ಳಿನ ಗೊಂಚಲನ್ನು ಕಿತ್ತೊಗೆದೆ. ಆದರೆ ಆಗೇನೂ ನೋವಾಗಲಿಲ್ಲ. ನಾನೂ ಅದರ ಬಗ್ಗೆ ಕೇರ್ ಮಾಡಲಿಲ್ಲ. ಇದೆಲ್ಲ ಹಳ್ಳಿಗಳಲ್ಲಿ ಮಾಮೂಲು, ಎಂದುಕೊಂಡು ಹಾಗೆಯೇ ಬೆಂಗಳೂರಿಗೆ ಬಂದೆ.

ಅದಾಗಿ ಕಾಲಲ್ಲಿ ಸೇರಿ ಕುಳಿತ ಮುಳ್ಳು ನನ್ನನ್ನು ಪೀಡಿಸಲು ಶುರು ಮಾಡಿತು. ಒಂದೆರಡು ಸಲ ಈ ಕುರಿತು ಮನೆಯಲ್ಲಿ ಉಚ್ಚರಿಸಿದೆ. ಆದರೆ ಮನೆಯಲ್ಲಿ ಮಕ್ಕಳೆಲ್ಲ 8 ಗಂಟೆಯೊಳಗೆ ತಮ್ಮ ಆಫೀಸಿಗೂ, ಮೊಮ್ಮಕ್ಕಳು ಶಾಲೆಗೆ ಹೋಗುತ್ತಿದ್ದುದರಿಂದ ಅದರ ಬಗ್ಗೆ ಚಿಂತಿಸಲು ಹೆಚ್ಚಿನ ಅವಕಾಶ ಸಿಗಲಿಲ್ಲ. ಆದರೆ ಮರುದಿನ ನನ್ನ ಮಗಳಿಗೆ ಅವಳು ಹೊರ ಹೋಗುವುದಕ್ಕಿಂತ ಮೊದಲೇ ಹೇಳಿದೆ. 'ಮಗಳೇ ನನ್ನ ಕಾಲಲ್ಲಿ ಮುಳ್ಳೇನೋ ಇದ್ದ ಹಾಗಿದೆ. ಸ್ವಲ್ಪ ನೋಡುತ್ತೀಯಾ' ಎಂದೆ. ಅದಕ್ಕೆ ಅವಳು 'ಮಲಗಿಕೋ ಅಮ್ಮ ನೋಡುತ್ತೇನೆ' ಎಂದಳು. ಮೊಬೈಲ್ ಬೆಳಕಿನಲ್ಲಿ ಮುಳ್ಳಿನ ಶೋಧ ಮಾಡ ತೊಡಗಿದಳು. 'ಅಮ್ಮಾ ನಿನ್ನ ಕಾಲಲ್ಲಿ ಚಿಕ್ಕ ಮುಳ್ಳೊಂದು ಕಾಣುತ್ತಿದೆ. ತಾಳು ಎಂದು ಅದನ್ನು ಕೀಳುತ್ತೇನೆ' ಎಂದಳು. ಚಿಮ್ಮಟಿಗೆ ಸೂಜಿ ತಂದು ಮುಳ್ಳಿನ ಸುತ್ತ ಹಡ್ಡಲು ಶುರು ಮಾಡಿದಳು. ಅವಳನ್ನು ನೋಡಿ ನನ್ನ ಮಗ ಬಂದ ತನ್ನ ಮೊಬೈಲ್‌ನಿಂದ ಇನ್ನಷ್ಟು ಬೆಳಕನ್ನು ಮುಳ್ಳಿನ ಮೇಲೆ ಚೆಲ್ಲಿದ. ಆದರೆ ಮುಳ್ಳು ಜಪ್ಪೋ ಎನ್ನಲಿಲ್ಲ. ಆಗ ಮೊಮ್ಮಕ್ಕಳು ನನ್ನ ಕಾಲಿನ ಸುತ್ತ ನಿಂತಿರುವವರನ್ನು ನೋಡುತ್ತ 'ಹೋ! ಅಜ್ಜಿ ಕಾಲಲ್ಲಿ ಮುಳ್ಳಂತೆ ಅದೂ ಅಕೇಶಿಯಾ' ಎನ್ನುತ್ತ ಸುತ್ತ ನೆರೆದರು. ಆದರೆ ಮುಳ್ಳು ಮಾತ್ರ ಕಾಲಲ್ಲಿ ಹಾಗೇ ಇತ್ತು.

ಇವರನ್ನೆಲ್ಲಾ ನೋಡಿದ ಸೊಸೆ ಲಂಚ್ ಬಾಕ್ಸ್ ಕಟ್ಟುವುದನ್ನು ಬಿಟ್ಟು 'ನಿಲ್ಲಿ, ನಿಲ್ಲಿ ನಾನು ಎರಡೇ ನಿಮಿಷದಲ್ಲಿ ಅದನ್ನು ಕಿತ್ತೆ ಕೊಡುವೆ' ಎಂದಳು. ಸೇಪ್ಟಿ ಪಿನ್‌ನಿಂದ ಮುಳ್ಳಿನ ಸುತ್ತ ಹಡ್ಡಿ ಚಿಮ್ಮಟಿಗೆಯಿಂದ ತಟ್ಟನೇ ಕಿತ್ತು ತೆಗೆದು 'ತಗೊಳ್ಳಿ ನಿಮ್ಮ ಜಾಲಿ ಮುಳ್ಳನ್ನು ಜೋಪಾನವಾಗಿಟ್ಟುಕೊಳ್ಳಿ' ಎಂದು ನನ್ನ ಅಂಗೈನಲ್ಲಿ ಇಟ್ಟಳು. ಅಲ್ಲಿ ಸೇರಿದ ಎಲ್ಲರೂ ಹೋ! ಹೋ! ಎಂದರು ಆಶ್ಚರ್ಯದಿಂದ ಮತ್ತೆ ಕೈಯಲ್ಲಿ ಮುಳ್ಳನ್ನು ಎಲ್ಲರೂ ಮುಟ್ಟಿ ನೋಡುವವರೇ.

'ಎಲ್ಲಿತ್ತು ಅಜ್ಜಿ ಇಷ್ಟು ಚಿಕ್ಕ ಮುಳ್ಳು? ಇದಕ್ಕಾಗಿಯೇ ನೀನು ಹಳ್ಳಿಗೆ ಹೋಗಿದ್ದೇನು?'ಎಂಬ ಪ್ರಶ್ನೆಗಳಿಗೆ ನಾನು ಯಾವುದಕ್ಕೂ ಉತ್ತರ ಕೊಡುವ ಸ್ಥಿತಿಯಲ್ಲಿರಲಿಲ್ಲ. ಬದಲಾಗಿ ಇವರೆಲ್ಲಾ ಒಂದು ಚಿಕ್ಕಮುಳ್ಳಿಗಾಗಿ ಕಾತರದಿಂದ ಸುತ್ತುವರೆದಿದ್ದನ್ನು ನೋಡಿ ದಿಗ್ಭ್ರಮೆಗೊಂಡೆ.

ಇದನ್ನು ನೋಡುತ್ತಾ, ಬೆಂಗಳೂರಿನಂತಹ ಒತ್ತಡಮಯ ಜೀವನದಲ್ಲಿರುವ ಎಷ್ಟೋ ಮಕ್ಕಳು ತಮ್ಮ ತಂದೆ ತಾಯಿಯವರನ್ನು ವೃದ್ಧಾಶ್ರಮದಲ್ಲೋ, ಇಲ್ಲಾ ಹಾಸ್ಟೆಲ್‌ನಲ್ಲೋ ಇಟ್ಟು ಪೋಷಿಸುತ್ತಿರುವಾಗ, ಮನೆಯಲ್ಲಿ ಅವರು ಹಾಯಾಗಿರುವಾಗ ನನ್ನ ವಾತ್ಸಲ್ಯಮಯವಾದ ಇಂಥ ಮಕ್ಕಳೂ ಇದ್ದಾರಲ್ವಾ ಎಂದು ಮನದಲ್ಲಿ ಲೆಕ್ಕಿಸುತ್ತಿರುವಾಗ ನನ್ನ ಕಣ್ಣಂಚಿನಲ್ಲಿ ನೀರಾಡದೇ ಇರಲಿಲ್ಲ. ಮಾತೃ ಪ್ರೀತಿ, ವಾತ್ಸಲ್ಯ, ಕಾಳಜಿ ಇನ್ನೂ ಹಲವು ಮನೆಗಳಲ್ಲಿ ಉಳಿದಿರುವಂತೆ ನಮ್ಮ ಮನೆಯಲ್ಲೂ ಉಳಿದಿದೆಯಲ್ಲಾ ಎಂದು ನನ್ನ ಮಕ್ಕಳ ಬಗ್ಗೆ ಹೆಮ್ಮೆ ಎನಿಸಿತು.

■